ಶ್ರೀ ಎಚ್. ಡಿ. ದೇವೇಗೌಡ — ಮಂತ್ರಿಗಳಂ ಪೆಂಡಿಂಗ್ ಕೇಸುಸ್‌ನಲ್ಲಿ ಹರಿಜನ — ಗಿರಿಜನರಿಗೆ ಮೊದಲು ನೇಮಕಾತಿಗಳನ್ನು ಮಾಡಿ ಉಳಿದಂದನ್ನು ರೀಜನಲ್‌ಪೈಸ್ ಬೇಸಿಸ್‌ನಲ್ಲಿ ಕೊಡುತ್ತೇವೆ ಎಂಬುದಾಗಿ ಹೇಳಿದರು. ಅದಕ್ಕೆ ನೀವು ಯಾವ ಕ್ರೈಟೀರಿಯ ಹಾಕಿದ್ದೀರಿ? ಅವರ ಇಯರ್ ಆಫ್ ಪಾಸಿಂಗ್ ತೆಗೆದ ಕೊಂಡಿದ್ದೀರಾ? ಅಥವಾ ಮೆರಿಟ್ ತೆಗೆದುಕೊಂಡಿದ್ದೀರಾ? ಅಭ್ಯರ್ಥಿಗಳನ್ನು ಕರೆದು ಇಂಟರ್‌ವ್ಯೂ ಮಾಡಿದ್ದೀರಾ? ಅಥವಾ ಪೊಲಿಟಿಕಲ್ ಇನ್‌ಫ್ಲುಯೆನ್ಸ್ ಮೇಲೆ ನೇಮಕಾತಿ ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ:— ಇನ್ನೂ ಇಂಟರ್‌ವ್ಯೂ ಮಾಡಿಲ್ಲ. ಬಾಕಿದ್ದನ್ನು ಸಾಕಾದಷ್ಟು ಕನ್‌ಸಿಡರೇಷನ್ ಇಟ್ಟುಕೊಂಡು ಮಾಡಿದ್ದೆವೆ ಅದರಲ್ಲಿ ಯಾರು ಯರ್‌ವೈಜ್ ಪಾಸ್ ಮಾಡಿದ್ದಾರೆಂಬುದನ್ನೂ ಸಹ ಇಟ್ಟು ಕೊಂಡಿದ್ದೇವೆ .ಇದಕ್ಕೆ ಬೆಂಗಳೂರು ಜಿಲ್ಲೆಯಲ್ಲಿರತಕ್ಕವರೇ ಹೆಚ್ಚಿಗೆ ಬರುತ್ತಾರೆ. ಪಾಸ್ ಮಾಡಿದವರೇ ಇಲ್ಲಿ ಹೆಚ್ಚಿಗೆ ಇದ್ದಾರೆ ಅನೇಕ ಕಡೆಗಳಲ್ಲಿ ನಾನು ನೋಡಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಂತಹವರು ಹೆಚ್ಚಿಗೆ ಇಲ್ಲ. ಮಾನ್ಯ ಸದಸ್ಯರ ಪ್ರಶ್ನೆ ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟುದ್ದು. ಈಗಾಗಲೇ ೨೭-೨೮ ಜನ ಡಾಕ್ಟರುಗಳನ್ನು ಶಿವಮೊಗ್ಗಾ ಜಿಲ್ಲೆಯಿಂದಲೇನೇಮಕ ಮಾಡಿದ್ದೇವೆ. ಆವಷ್ಟು ಇನ್ನುಳಿದುದನ್ನು ರೀಜಿನಲ್ ವೈಜ್ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಹಾಸನ ಜಿಲ್ಲೆಯಲ್ಲಿ ಬಹಳ ಕಡಿಮೆ ಇದ್ದಾರೆ.ಅಲ್ಲಿರತಕ್ಕ ಡಾಕ್ಟರ್‌ಗಳೊಡನೆ ಸಹ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್:— ತಾವು ನವಂಬರ್ ತಿಂಗಳಲ್ಲಿ ಲೋಕಲ್ ಅಪಾಯಿಂಟ್‌ಮೆಂಟ್ ಮಾಡಿ ಡಾಕ್ಟರುಗಳನ್ನು ತೆಗೆದುಕೊಂಡಿದ್ದೀರಿ. ಅಲ್ಲಿ ಹೌಸ್ ಸರ್ಜನ್ ಆದವರು ಯಾರು ಬಿಟ್ಟುಬಿಟ್ಟಿದ್ದಾರೆಂಬುದನ್ನು ತಮ್ಮ ಗಮನಕ್ಕೆ ಬಂದಿದೆಯೇ? ಅಂಥಾದ್ದನ್ನು ತಮ್ಮ ಗಮನಕ್ಕೆ ತಂದರೆ ಅದನ್ನು ಪುನರ್‌ಪರಿಶೀಲನೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ:— ಅಂಥಾದ್ದನ್ನು ನನ್ನ ಗಮನಕ್ಕೆ ತೆಗೆದುಗೊಂಡು ಬಂದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

PERMITTING THE GOVERNMENT DOCTORS TO DO PRIVATE PRACTICE

514. SRI S. M. SHEERANALY CHANDRASHEKHAR (Hosanagar).—

Will the Minister for Health be pleased to state :—

(*a*) whether doctors in Government Hospitals in the State are permitted to have private practice;

(*b*) if so, whether there are any rules or executive instructions issued by Government in this behalf;

(*c*) whether there is any proposal before Government to do away with the practice of allowing the doctors to have private practice and instead increase their salaries?

SRI H. SIDDAVEERAPPA, (Minister for Health):—

(*a*) Yes, outside the Hospitals.

(*b*) Yes, there is an executive order issued to that effect.

(*c*) No.

ಶ್ರೀ ಎಂ. ಎಸ್. ಶೀರನಾಳಿ ಚಂದ್ರಶೇಖರ್.— ನನ್ನ (ಸಿ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದೆ. ತಮ್ಮ ಸರ್ಕಾರದ ಆಜ್ಞೆಯ ಪ್ರಕಾರ ಸರ್ಕಾರದ ಆಸ್ಪತ್ರೆಗಳಲ್ಲಿ ಕೆಲಸಮಾಡತಕ್ಕ ಡಾಕ್ಟರುಗಳಿಗೆ ಖಾಸಗಿಯಾಗಿ ಉದ್ಯಮ ಕೈಗೊಳ್ಳುವುದಕ್ಕೆ ಅವಕಾಶ ಕೊಡುವುದರಿಂದ ಸರ್ಕಾರದ ಆಸ್ಪತ್ರೆಯ ಕೆಲಸಕ್ಕೆ ಕುಂದುಂಟಾಗುವುದಿಲ್ಲವೇ?

†ಶ್ರೀ ಎಚ್. ಸಿದ್ದವೀರಪ್ಪ: —ಇಲ್ಲ. ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ಪೇಕಮಿಷನ್ನ ನವರು, ತುಕೋಳ್ ಕಮಿಷನ್ನಿನವರು ಒಂದು ಶಿಫಾರಸು ಮಾಡಿದ್ದಾರೆ. ಆ ಒಂದು ಶಿಫಾರಸಿನಲ್ಲಿ ಒಂದು ಪ್ಯಾರಾ ಇದೆ. ಅದನ್ನು ಇಲ್ಲಿ ಓದುವುದಕ್ಕೆ ಕಾಲಾವಕಾಶವಿಲ್ಲ. ಆವರೇ ಪ್ರೈವೇಟ್ ಪ್ರಾಕ್ಟೀಸ್ ನಿರ್ಬಂದಿಸುವುದು ಸರಿಯಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದು ಎತಿಕಲ್ ಸ್ಟಾಂಡರ್ಡಿಗೆ ವಿರೋಧವಾಗುತ್ತದೆ. ನಿರ್ಬಂಧ ಮಾಡಿದರೂ ಅವರು ಪ್ರೈವೆಟ್ ಪ್ರಾಕ್ಟೀಷನರ್ ಆಗಿ ಕೆಲಸ ನಿರ್ವಾಯೇ ಮಾಡುತ್ತಾರೆ. ಅದನ್ನು ನಾವು ತಪ್ಪಿಸುವುದಕ್ಕಾಗುವುದಿಲ್ಲ. ಆದಕ್ಕೋಸ್ಕರ ನಾನ್ ಪ್ರಾಕ್ಟೀಸಿಂಗ್ ಅಲೋಯನ್ಸ್ ತೆಗೆಯುವುದು ಉತ್ತಮ, ಸರ್ಕಾರಕ್ಕೆ ದುಡ್ಡು ಉಳಿಯುತ್ತದೆ. ಅವರು ಮುಂದೆ ನ್ಯಾಯವಾಗಿ ನಡೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಅದನ್ನು ಗಮನದಲ್ಲಿಟ್ಟುಕೊಂಡು, ಯೋಚನೆ ಮಾಡಿ ಅದನ್ನು ತೆಗೆಯುವುದು ಸಾಧ್ಯ ಎಂಬುದಾಗಿ ತೆಗೆದುಹಾಕಿದ್ದೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ — ಈಗ ಈ ಆಜ್ಞೆ ಸರ್ಕಾರಿ ಆಸ್ಪತ್ರೆಗಳಲ್ಲಿ ಜಾರಿಯಲ್ಲಿದೆ. ಇದರಿಂದ ಅಲ್ಲಿ ಜನರಿಗೆ ಮುಫತ್ತಾಗಿ ಔಷಧ ಕೊಟ್ಟು ಮುಫತ್ತಾಗಿ ಕೆಲಸ ಮಾಡಬೇಕೆಂಬ ದೃಷ್ಟಿ ಅವರಲ್ಲಿ ಕಡಿಮೆಯಾಗಿ ಸ್ವಂತವಾಗಿ ಪ್ರಾಕ್ಟಿಸ್ ಮಾಡುವ ದೃಷ್ಟಿಯೇ ಅವರಿಗೆ ಹೆಚ್ಚಾಗುತ್ತದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ:— ಆಫೀಸ್ ಅವರ್ಸ್‌ನಲ್ಲಿ ಆ ರೀತಿಯಾಗಿ ಕೆಲಸ ಮಾಡುವುದು ಕಾನೂನಿಗೆ ವಿರೋಧ. ಅಂತಹ ಕೇಸ್ ನಮ್ಮ ಗಮನಕ್ಕೆ ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ. ಆಸ್ಪತ್ರೆಗಳ ವರ್ಕಿಂಗ್ ಅವರ್ಸ್ ಬೆಳಿಗ್ಗೆ ೮ ರಿಂದ ಒಂದು ಘಂಟೆಯವರೆಗೆ ಮತ್ತು ಮಧ್ಯಾಹ್ನ ೫ ರಿಂದ ೬ ರವರೆಗೆ ಇರುತ್ತದೆ. ೬ ಗಂಟೆಯ ಮೇಲೆ ಏನಾದರೂ ಅವಕಾಶ ಸಿಕ್ಕಿದರೆ, ಅವರ ಕೆಲಸವನ್ನು ಬೇರೆ ಕಡೆಯಲ್ಲಿ ಎಲ್ಲಾದರೂ ಮಾಡಲಿ, ಯಾರು ನೋಡಿದರೂ ಪರವಾ ಇಲ್ಲ. ಆದರೆ ಅವರ ಮನಯಲ್ಲಿ ಅವರೇ ಕ್ಲಿನಿಕ್ ಓಪನ್ ಮಾಡಬಾರದೆಂದು ನಾನು ಹೇಳುತ್ತೇನೆ.

SRI DODDATHIMMIAH .— Have you atleast taken any preventive measures to stop this private practice ?

SRI H. SIDDAVEERAPPA — Due to this private practice generally Government medicines will be smuggled. ಸಾಮಾನ್ಯವಾಗಿ ಮೆಡಿಸನ್ಸ್, ಡಾಕ್ಟರುಗಳ ಕಡೆಯೇ ಇರುತ್ತದೆ. ಅವರ ಕಡೆಯಿಂದ ಕಾಂಪೌಡರುಗಳು ತೆಗೆದುಕೊಳ್ಳಬೇಕು. ಅವರು ಹೊರಗಡೆ ಕೆಲಸ ಮಾಡಬಾರದು ಎಂದರೆ ಒಂದು ಉದಾಹರಣೆ ಹೇಳುವುದೆಂದರೆ ರಾತ್ರಿ ೧೧ ಗಂಟೆ ಸಮಯವಾಗಿರುತ್ತದೆ, ಯಾವುದಾದರೂ ಒಂದು ಪುಗುಸಿಗೆ ಪ್ರಾಣ ಹೋಗುವ ಸ್ಥಿತಿ ಬಂದಿರುತ್ತದೆನ್ನೋಣ, ಆ ಒಂದು ಸ್ಪೇಜಿನಲ್ಲಿ ಡಾಕ್ಟರ್‌ಗಳಾಗಿರುವವರು ನಾನು ಬಂದು ನೋಡುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ವಿ. ಎನ್. ಪಾಟೀಲ್.— ಪ್ರೈವೇಟ್ ಪ್ರಾಕ್ಟೀಸ್‌ಗೆ ಪರ್ಮಿಷನ್ ಕೊಟ್ಟರೆ ಆಗ ಸರ್ಕಾರದವರು ಕೊಡತಕ್ಕ ಮೆಡಸನ್ಸ್‌ಗಳನ್ನು ಅವರು ಉಪಯೋಗಿಸಬಹುದೆಂದು ಹೇಳುತ್ತಾರೆ. ಕೆಲವು ಆಸ್ಪತ್ರೆಗಳಲ್ಲಿ ಮೆಡಿಸನ್ಸನ್ನು ಸ್ಟಾಕ್‌ಗೆ ತೆಗೆದುಕೊಂಡರೂ ಅವು ಪತ್ತೆ ಇರುವುದೇ ಇಲ್ಲ. ಆದ್ದರಿಂದ ಅಲ್ಲಿ ಜಾಸ್ತಿ ಕರಪ್ಷನ್ ಆಗುತ್ತಿದೆಯೆಂಬುದನ್ನು ತಾವು ಒಪ್ಪುತ್ತೀರಾ? ಇದಕ್ಕೆ ಬದಲಾಗಿ ಅವರಿಗೆ ನಾನ್ ಪ್ರಾಕ್ಟೀಸಿಂಗ್ ಅಲೊಯನ್ಸ್ ಕೊಡುವುದಕ್ಕಾಗುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ:— ನಾವು ಅವರಿಗೆ ನಾನ್ ಪ್ರಾಕ್ಟೀಸಿಂಗ್ ಅಲೊಯನ್ಸ್ ಕೊಡುವುದಾದರೆ ಅದು ಅವರ ಸಿಗರೇಟಿಗೆ, ಬೀಡಿಗೆ ಆಗುವುದಿಲ್ಲ, ಪತ್ತಾಡಲ್ಲಿಯಲ್ಲಿ ಇರುವಂತೆ ಅವರಿಗೆ ನಾನ್ ಪ್ರಾಕ್ಟೀಸಿಂಗ್ ಅಲೊಯನ್ಸ್ ಕೊಟ್ಟಿದ್ದೇ ಆದರೆ ನಮ್ಮ ಬಜೆಟಿನಲ್ಲಿ ಹಣವೇ ಇರುವುದಿಲ್ಲ. ನಾವು ಎಷ್ಟು ಆ ರೀತಿಯಾಗಿ ಅಲೊಯನ್ಸ್ ಕೊಟ್ಟರೂ ಎತಿಕಲ್ ಸ್ಟಾಂಡರ್ಡ್ ಇಲ್ಲದೇ ಇದ್ದರೆ ಎನೂ ಪ್ರಯೋಜನವಿಲ್ಲ. ಅವರಿಗೆ ಭೂತದಯೆ ಇಲ್ಲದಿದ್ದರೆ ಹೇಗೆ? ಇದರಲ್ಲಿ ಕಳ್ಳತನ ಏಕೆ ಮಾಡಬೇಕು? ಅವರು ಹೊರಗಡೆ ಹೋಗಿ ಕೆಲಸ ಮಾಡುವ ಶಕ್ತಿ ಇದ್ದರೆ ಮಾಡಿಕೊಳ್ಳಲಿ.

ಶ್ರೀ ಸಿ. ಬೈರೇಗೌಡ —ಸರ್ಕಾರಿ ನೌಕರ ಎಂದರೆ ಆತನು ೨೪ ಗಂಟೆಗಳವರೆಗೂ ಸರ್ಕಾರಿ ನೌಕರನೇ ಆಗಿರುವುದರಿಂದ ಅವರು ಹಣವನ್ನು ಬೇರೆಯವರಿಂದ ಯಾವ ಕಾಲದಲ್ಲೇ ತೆಗೆದುಕೊಂಡರೂ ಅದನ್ನು ಲಂಚವೆಂದೇ ಪರಿಗಣಿಸಬೇಕಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ .—ಅವರಿಗೆ ಅಂದರೆ ಸಾಮಾನ್ಯವಾಗಿ ಡಾಕ್ಟರುಗಳಿಗೆ ಎಷ್ಟೆ ಗಂಟೆಗಳ ಕಾಲ ಕೆಲಸ ಮಾಡಬೇಕೆಂದು ನಿಗದಿ ಮಾಡಿದೆ. ತಾಲ್ಲೂಕ್ ಕಸಬಾಗಳಲ್ಲಾದರೆ ಆಲ್ಲಿ ಬೇರೆ ಡಾಕ್ಟರುಗಳು ಇರುವುದಿಲ್ಲ. ಆಲ್ಲಿನ ವಿಷಯಬೇರೆ. ದೊಡ್ಡ ದೊಡ್ಡ ನಗರಗಳಲ್ಲಿ ಆಕ್ಸಿಡೆಂಟಲ್ ಕೇಸಸ್‌ಗಳಿಗೆ ಬೇರೆ ಡಾಕ್ಟರುಗಳನ್ನು ಇಡಲಾಗಿದೆ. They are not like ministers or M.L.As.

ಶ್ರೀ ಎಂ. ಬಿ. ರಾಮಸ್ವಾಮಿ .—ಡಾಕ್ಟರುಗಳು ಆಫೀಸ್ ಅವರ್ಸ್ ಬಿಟ್ಟು ಬೇರೆ ವೇಳೆಯಲ್ಲಿ ಪ್ರಾಕ್ಟೀಸ್ ಮಾಡಬಹುದೆಂದು ಮಾನ್ಯ ಸಚಿವರು ಅಪ್ಪಣೆ ಕೊಡಿಸಿದರು. ಅಂದರೆ ಆಸ್ಪತ್ರೆಯಲ್ಲಿ ದೊರೆಯತಕ್ಕ ಔಷಧಿಗಳನ್ನು ಉಪಯೋಗಿಸಿಕೊಂಡು ಇವರು ಮನೆಯಲ್ಲಿ ಪ್ರಾಕ್ಟೀಸ್ ಮಾಡುವುದಕ್ಕೆ ಅವಕಾಶಕೊಟ್ಟಿರುವುದರಿಂದ ಸರ್ಕಾರಿ ಔಷಧಗಳನ್ನು ತೆಗೆದುಕೊಂಡು ಹೋಗಿ ಅವರ ಆರ್ಥಿಕ ಪರಿಸ್ಥಿತಿ ಉತ್ತಮಪಡಿಸಿಕೊಳ್ಳುವುದಕ್ಕೆ ಇವರಿಂದ ಅವಕಾಶ ಹೆಚ್ಚುವುದಿಲ್ಲವೇ? ಇದಕ್ಕೇನಾದರೂ ತಕ್ಕ ಸೂಪರ್ ವಿಜನ್ ಇಟ್ಟಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ .—ಅಂಥಾ ಸಂದರ್ಭಗಳು ಸಿಕ್ಕಿದ ಕಡೆ ಸರ್ಕಾರದವರು ಸೂಕ್ತ ಕ್ರಮ ಗಳನ್ನು ಕೈಗೊಂಡಿದ್ದಾರೆ ಅನ್ನುವುದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ .—ಮಾನ್ಯ ಮಂತ್ರಿಗಳು ರೆಗ್ಯೂಲರ್ ಅವರ್ಸ್ ಡ್ಯೂಟಿ ಇರುತ್ತೆ ಅನಂತರ ಅವರು ಹೊರಗಡೆ ಪ್ರಾಕ್ಟೀಸ್ ಮಾಡಬಹುದೆಂದು ಅಪ್ಪಣೆ ಕೊಡಿಸಿದರು, ಹಾಗಾ.....

SRI H. SIDDAVEERAPPA.—I am sorry, I want to clarify. They are Government servants but they have to work at regulated hours.

ಶ್ರೀ ಎಚ್. ಎಸ್. ಸಿದ್ದಪ್ಪ .—ಮಾನ್ಯ ಮಂತ್ರಿಗಳು ರಾತ್ರಿ ೭ ಗಂಟೆಯ ಮೇಲೆ ಡಾಕ್ಟರನ್ನು ತಮ್ಮ ಮನೆಗಳಿಗೆ ಕರೆಸಿಕೊಂಡರೆ ಎಷ್ಟು ಫೀಜನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ .—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ .—ಸಾಮಾನ್ಯವಾಗಿ ಡಾಕ್ಟರ್ಸ್ ಕ್ವಾರ್ಟರುಗಳು ಆಸ್ಪತ್ರೆಗೆ ಹೊಂದಿಕೊಂಡ ಹಾಗೆ ಇರುವುದರಿಂದ ಅವರು ಅದೇ ಸರ್ಕಾರಿ ಕಟ್ಟಡದಲ್ಲಿ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದು ಕಾನೂನಿಗೆ ವಿರೋಧವಾಗುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ .—ಇದು ಬಹಳ ಗಮನಾರ್ಹವಾದ ಪ್ರಶ್ನೆ, ವಿಚಾರಮಾಡೋಣ.

PAYMENT OF RENT OF GEETHA SISHUVIHAR SOCIETY BUILDING

664. SRI A. M. SURYANARAYANA GOWDA (Yelahanka) .—

Will the Minister for Education be pleased to state .—

(*a*) whether the rent of the building occupied by Geetha Sishuvihar Society due to Shri M. L. A. Rao for the period 1961-67 has not been paid ;

(*b*) if so, whether it has come to the notice of Government that the rent has been accounted for as having been paid and has been audited and approved by the Education Department ;

(*c*) if so, the action taken by Government in this behalf ?

SRI A. R. BADARINARAYANA (Minister for Education) .—

(*a*) The rent has been paid.

(*b*) Yes.

(*c*) Does not arise in view of reply to clause (*a*) above.